7. ಸರ್ವೇ 52/4, 14 ಗುಂಟೆ, ಸರ್ವೇ ನಂ.27/1, 1 ಎಕರೆ ಮತ್ತು ಕಾನಿಷ್ಮಾರಿ ನಂ.21/27-12, 20*28 ಸ್ವತ್ತುಗಳು ನಮ್ಮ ಕುಟುಂಬಕ್ಕೆ ಇತ್ತು ಎಂದರೆ ಸರಿಯಲ್ಲ. ನನ್ನ ತಾತನ ಸ್ವತ್ತಿನ ಪಹಣಿ ಮತ್ತು ಖಾತೆ ನನ್ನ ತಾತನ ಹೆಸರಿನಲ್ಲಿಯೇ ಇದೆ ಎಂದರೆ ಸರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಮಮ್ತಾಜ್)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.

ದಿಃ29-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ನಂ.16 ಮತ್ತು 17ರ ಪರ ಶ್ರೀ. ಪಿ.ಎಸ್.ಆರ್ ವಕೀಲರಿಂದ ಃ

8. ಸರ್ವೇ ನಂ.52/4, 14 ಗುಂಟೆ, ಸರ್ವೇ ನಂ.271/1, 1 ಎಕರೆ, ಕಾನಿಷ್ಮಾರಿ ನಂ.21/27-12, 20*28 ಅಡಿ ಸ್ವತ್ತುಗಳು ಈಗಾಗಲೇ ವಿಭಾಗವಾಗಿದ್ದು ನಾವು ಪ್ರತ್ಯೇಕವಾಗಿ ಅನುಭವಿಸುತ್ತಿದ್ದೇವೆ ಎಂದರೆ ಸರಿ. ಈ ಮೂರೂ ಸ್ವತ್ತುಗಳಿಗೆ ವ್ಯಾಜ್ಯ ಇಲ್ಲದೇ ಇರುವ ಕಾರಣ ಈ ಮೂರು ಸ್ವತ್ತುಗಳನ್ನು ನ್ಯಾಯಾಲಯದಲ್ಲಿ ತೋರಿಸಿಲ್ಲ ಎಂದರೆ ಸರಿ.

9. ಈ ಮೊದಲು ಕುಟುಂಬದಲ್ಲಿ ವಿಭಾಗ ಆದ ವಿಚಾರವನ್ನು ಈ ದಾವೆ ಹಾಕುವ ಸಂದರ್ಭದಲ್ಲಿ ನನ್ನ ವಕೀಲರಿಗೆ ಹೇಳಿಲ್ಲ. ಕಳೆದ 10 ವರ್ಷಗಳಿಂದ ಪ್ರತ್ಯೇಕ ಪ್ರತ್ಯೇಕವಾಗಿ ನಾವು ಈ ಮೇಲೆ ಹೇಳಿದ 3 ಸ್ವತ್ತುಗಳನ್ನು ಅನುಭವಿಸುತ್ತಿದ್ದೇವೆ ಅಂದರೆ ದಾವಾ ಹಾಕುವ 10 ವರ್ಷದ ಮೊದಲು ಎಂದರೆ ಸರಿ. ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸುತ್ತಿರುವ ಜಾಗಗಳಿಗೆ ನಾವು ಪ್ರತ್ಯೇಕ ಪ್ರತ್ಯೇಕವಾಗಿ ಕಂದಾಯ ಕಟ್ಟುತ್ತಿದ್ದೇವೆ ಎಂದರೆ ಸಾಕ್ಷಿ ಯಾರೂ ಕಂದಾಯ ಕಟ್ಟುತ್ತಿಲ್ಲ ಎಂದು ನುಡಿಯುತ್ತಾರೆ. ನಾವು ನಮ್ಮ ಕುಟುಂಬದಲ್ಲಿ ಜೀವನವನ್ನು ಪ್ರತ್ಯೇಕವಾಗಿ ಅದೇ ರೀತಿ ವ್ಯವಹಾರವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದೇವೆ ಎಂದರೆ ಸರಿ.

10. 1982 ರಲ್ಲಿ ಮಾರಾಟ ಮಾಡುವ ಸಂದರ್ಭದಲ್ಲಿ ನಾನು ಹಾಗೂ ಉಳಿದ ಎಲ್ಲಾ ಪಕ್ಷಕಾರರು ನಮ್ಮ ತಂದೆಯ ಅಡಿಯಲ್ಲಿ ವಿಶ್ವಾಸದಿಂದ ಬಾಳುತ್ತಿದ್ದೆವು ಎಂದರೆ ಸರಿ. ನನ್ನ ತಂದೆ ಯಾವತ್ತೂ ನಮ್ಮ ಇಚ್ಛೆಗೆ ವಿರುದ್ಧವಾಗಿ ನಡೆದಿಲ್ಲ ಎಂದರೆ ಸರಿಯಲ್ಲ. 1982 ರ ಮೊದಲು ನಮ್ಮ ಕುಟುಂಬದ ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ಯಾವತ್ತೂ ಅವ್ಯವಹಾರಿಕ ಜೀವನ ಮಾಡಿಲ್ಲ. ನನ್ನ ತಂದೆ ಬದುಕಿರುವವರೆಗೂ ಮಕ್ಕಳ ಹಿತಾಸಕ್ತಿಯನ್ನು ಕಾಪಾಡಿದ್ದಾರೆ ಎಂದರೆ ಸರಿ.

11. ನಮ್ಮ ಕುಟುಂಬದಲ್ಲಿ ಯಾವಾಗಲೋ ವಿಭಾಗವಾಗಿದ್ದು ದಾವಾ ಆಸ್ತಿಗಳನ್ನು ಒಳಗೆ ಹಾಕುವ ಉದ್ದೇಶದಿಂದ ಈ ದಾವೆ

ಹಾಕಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.16 ಹಾಗೂ 17 ಅವರಿಗೆ ತೊಂದರೆ ಮಾಡುವ ಉದ್ದೇಶಕ್ಕಾಗಿ ಈ ದಾವೆ ಹಾಕಿದ್ದೇವೆ ಎಂದರೆ ಸರಿಯಲ್ಲ.

(ಪ್ರತಿವಾದಿ ನಂ.18 ಮತ್ತು 19 ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**